ಸುಳ್ಳುದನಿಯಾದರೂ ಕೇಳಲು ಚೆಂದವಿದೆ. ಮಾತಾಡಿ. ಬಲವಂತವಿಲ್ಲ, ಅನ್ನಿಸಿದರೆ ಮಾತ್ರ.

★★★

ಸುನಯನ: ಎರಡೂ ಪಾದ ಹಿಂದಕ್ಕೆ ಮಡಚಿ, ಒಂದು ಕೈಯನ್ನು ನೆಲಕ್ಕೂರಿ ದಿಗಂತದತ್ತ ನೋಡುತ್ತ ಕುಳಿತಿದ್ದಳು. ಚೈತ್ರ ಅವಳ ಪಾದದ, ಕೈಗಳ ತುಸು ನೀಳವೆನ್ನಬಹುದಾದ ಬೆರಳುಗಳನ್ನು ಗಮನಿಸುತ್ತಿದ್ದ. ಆಕೆಯ ಕಿವಿಗಿದ್ದ ಕಪ್ಪು ಸಾಲಿಗ್ರಾಮದ ಹರಳಿನ ಜುಮುಕಿಯೊಂದು ಆಕೆ ಅಲುಗಿದಾಗಲೆಲ್ಲ ತಾನೂ ವಿಧೇಯತೆಯಿಂದ ಅಲುಗುತ್ತಿತ್ತು. ಜೋರಾಗಿ ಉಸಿರುಬಿಟ್ಟಾಗ, ಎಳೆದುಕೊಂಡಾಗ, ಮೂಗಿನಹೊರಳೆ ಅರಳುತ್ತಿದ್ದವು. ಅವಳ ತುಟಿ ತೀರಾ ಪುಟ್ಟದ್ದಾಗಿದ್ದು ಅವಳು ಬಾಯಿತೆರೆದರೆ ಮೊದಲು ಹಲ್ಲುಗಳು ಕಾಣುತ್ತಿದ್ದವು. ಅವಳು ನೆಲಕ್ಕೂರಿ ಕುಳಿತಿದ್ದ ಕೈಯ ಹಿಂಭಾಗಕ್ಕೆ ಯಾವಾಗೊ ಸುಟ್ಟು ಮಾಗಿದ ಗಾಯದ ಗುರುತು. ಅವಳನ್ನೇ ಗಮನಿಸುತ್ತ ಕುಳಿತ ಚೈತ್ರನಿಗೆ ಈಕೆ ಎಷ್ಟು ಸಾತ್ವಿಕ ಚೆಲುವೆ ಎಂದೆನಿಸಿತು. ತಾನು ಚಿಕ್ಕವನಿದ್ದಾಗ ಸಿನಿಮಾವೊಂದನ್ನು ನೋಡಿ ಆ ಚಿತ್ರದ ನಾಯಕಿಯೇ ಅತಿಸುಂದರಿ ಎನ್ನಿಸಿದ್ದು, ಸುನಯನ ಆಕೆಗಿಂತಲೂ ಅಪೂರ್ವ ಚೆಲುವೆ ಎಂದು ಈಗ ಅನ್ನಿಸುತ್ತಿರುವುದು – ಎರಡನ್ನು ತಾಳೆ ಮಾಡಿ ನೋಡಿದ. ಹಾಗೇ ಆಕೆಯನ್ನು ಗಮನಿಸುತ್ತಿದ್ದಾಗ ಸುನಯನ ಎದ್ದಳು. ಎರಡೂ ಕೈಗಳಿಂದ ಸೀರೆಯ ಹಿಂಭಾಗ ಕೊಡವಿಕೊಂಡು ನಡೆಯತೊಡಗಿದಳು. ಚೈತ್ರ ಅವಳನ್ನು ಹಿಂಬಾಲಿಸಿದ.

ಸುನಯನ ಎದೆಗೆ ಕೈಕಟ್ಟಿ ಅಂತರಗಂಗೆಯಿಂದ ರಂಗೋಲಿ ತೂರಿದ ಹಾಗೆ ಬಂಡೆಗಳ ಕೊರಕಲಿನಿಂದ ಚಿಕ್ಕದಾಗಿ ಬೀಳುತ್ತಿದ್ದ ಜಲಪಾತದ ಝರಿನೋಡುತ್ತ ನಿಂತಳು. ಆಕೆಗೆ ತುಸುದೂರದಲ್ಲಿ – ಚೈತ್ರ ಒಂದು ನೀಳ ಉಸಿರುಬಿಟ್ಟು ಇವನತ್ತ ತಿರುಗಿದಳು ಸುನಯನ.

★★★

ಹೇಳಿದೆ:

ಆ ದುಃಸ್ವಪ್ನದ ನಂತರ ಏನಾಯಿಯೆಂದು ಕೇಳಲೇ ಇಲ್ಲವಲ್ಲ ಚೈತ್ರ ನೀನು? ನಾನೇ ಹೇಳುತ್ತೇನೆ ಯಾವಾಗಲಾದರೂ ಎಂದೆನಿಸಿರಬೇಕು ನಿನಗೆ. ಆದರೂ ಮೊದಲಿನಷ್ಟು ಭಾವುಕಳಾಗುವುದಿಲ್ಲ ಈಗ. ದುರ್ಘಟನೆಗಳು ನಡೆದು ವರ್ಷಗಳೇ ಕಳೆದುಹೋಗಿವೆಯಲ್ಲ. ಮೊದಲಿನ ಭೀಕರತೆ ತೀವ್ರತೆ ಈಗ ಉಳಿದಿಲ್ಲವಾದರೂ ಆ ಕರಾಳ ಛಾಯೆ ಇದ್ದೇ ಇದೆ. ಅದರ ಭೀಕರನೆರಳೇ ಆಗೀಗ ಬೆನ್ನಟ್ಟಿ ನನ್ನನ್ನು ದಿಕ್ಕು ದಿಕ್ಕು ಅಲೆಸಿದ್ದು, ಎಲ್ಲಿ ನಿಂತರೂ ಕೂತರೂ ಚಡಪಡಿಕೆ, ಅಸಹನೀಯತೆ ಹುಟ್ಟಿಸಿದ್ದು, ಸಾಯಲು ಪ್ರೇರೇಪಿಸಿದ್ದು, ಚಳಿ, ಗಾಳಿ, ಗ್ರೀಷ್ಮದುರಿಬಿಸಿಲು, ಶಿಶಿರದಿಬ್ಬನಿಗಳಲ್ಲಿ ಸಾಂತ್ವನ ಸಂತೈಕೆ ಅರಸುತ್ತ ಕಾಣದ ಕರೆಯ ಕೂಗನ್ನು

## ಇಲ್ಲಿಯವರೆಗೆ...

ನೀರಸವೆನಿಸುವ, ಪ್ರತಿ ಗಳಿಗೆಯೂ ಅಸಹನೀಯವೆನಿಸುವ ಹತಾಶೆಯ ಬದುಕನ್ನು ಕೊನೆಗಾಣಿಸಿಕೊಳ್ಳಲು ಹೊರಟಿದ್ದ ಹುಡುಗಿಗೆ, ತನ್ನ ಆರಾಧಕ, ಅಭಿಮಾನಿ ಹುಡುಗ ಸಿಗುತ್ತಾನೆ. ಮೌನಿಯಾಗಿದ್ದವಳನ್ನು ಮಾತಿಗೆಳೆಯುತ್ತಾನೆ. ಅವಳು ತನ್ನ ಗತವನ್ನು ಹೊರಹಾಕಿ ಹಗುರಾಗುತ್ತಾಳೆ... ಇಬ್ಬರೂ ಗುಡ್ಡದ ತುತ್ತ ತುದಿಗಿರುವ ಅವನ ಪುಟ್ಟ ಮನೆಯತ್ತ ಹೆಜ್ಜೆ ಹಾಕುತ್ತಾರೆ...